ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 13.08.2024.

**ಪಾಟೀ ಸವಾಲು – ವಾದಿ ಪರಃ ವಕೀಲರಿಂದಃ**

ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ ನನ್ನ ಪ್ರತಿವಾದ ಪತ್ರ ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ ನನ್ನ ಸಹೋದರಿಯರು ರಿ.ಸಾ. ನಂಬರ 173/1 ಚಿಕ್ಕಬಾಸೂರ ಗ್ರಾಮದ ಆಸ್ತಿಯಲ್ಲಿ ಪಾಲು ಬೇಕು ಅಂತಾ ಸಲ್ಲಿಸಿರುತ್ತಾರೆ. ದಾವಾ ಆಸ್ತಿ ನಮ್ಮ ತಾಯಿಯ ತಂದೆಯಿಂದ ನಮ್ಮ ತಾಯಿಗೆ ಬಂದಿದ್ದು ನಂತರ ನನ್ನ ಹೆಸರಿಗೆ ಬಂದಿರುತ್ತದೆ. ನಮ್ಮ ತಾಯಿಯ ಹೆಸರಿನ ಆಸ್ತಿಯನ್ನು ನನ್ನ ಹೆಸರಿಗೆ ಮಾಡುವಾಗ ಊರಿನಲ್ಲಿ ಹಿರಿಯರು ಸೇರಿ ನಮ್ಮ ಅಣ್ಣ ಮತ್ತು ಸಹೋದರಿಯರ ಸಹಿ ಮಾಡಿಸಿ ನನ್ನ ಹೆಸರಿಗೆ ಮಾಡಿಸಿರುತ್ತಾರೆ. ನನ್ನ ಹೆಸರಿಗೆ ದಾವಾ ಆಸ್ತಿ ಆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಹೆಸರಿಗೆ ದಾವಾ ಆಸ್ತಿ ಆದ ನಂತರ ನನ್ನ ತಾಯಿ ನನ್ನ ಮೇಲೆ ಮರಳಿ ನನ್ನ ಆಸ್ತಿ ನನಗೆ ಕೊಡಿಸಬೇಕು ಅಂತಾ ನನ್ನ ಮತ್ತು 2 ನೇ ಪ್ರತಿವಾದಿಯ ಮೇಲೆ ದಾವೆ ಸಲ್ಲಿಸಿದ್ದಳು ಎಂದರೆ ಸರಿ. ಸದರಿ ದಾವೆ ನಂಬರ 149/2018 ಅಂತಾ ದಾಖಲಾಗಿತ್ತು ಎಂದರೆ ಸರಿ. ಸದರಿ ದಾವೆ ಚಾಲ್ತಿ ಇರುವಾಗ ನನ್ನ ತಾಯಿ ಮರಣ ಹೊಂದಿದ್ದರಿಂದ ದಾವೆ ವಜಾ ಆಗಿದೆ ಎಂದರೆ ಸರಿ. ನಮ್ಮ ತಾಯಿ ಅಸಲು ದಾವಾ ನಂಬರ 149/2018 ರಲ್ಲಿ ನನ್ನ ಹೆಸರಿಗೆ ಆದ ದಾವಾ ಆಸ್ತಿಯ ಬಗ್ಗೆ ಪ್ರಶ್ನೆ ಮಾಡಿದ್ದು ನಾನು ಬಿಟ್ಟು ಕೊಟ್ಟಿಲ್ಲಾ ಎಂದರೆ ಸರಿಯಲ್ಲಾ. ದಾವಾ ಆಸ್ತಿಯನ್ನು ನನಗೂ ಮತ್ತು ನನ್ನ ಸಹೋದರನಿಗೂ ನನ್ನ ತಾಯಿ ಬಿಟ್ಟುಕೊಟ್ಟಿಲ್ಲಾ ಎಂದರೆ ಸರಿಯಲ್ಲಾ. ನನ್ನ ತಾಯಿ ಆಸ್ತಿಯನ್ನು ನನಗೂ ಮತ್ತು ನನ್ನ ಸಹೋದರನಿಗೆ ಆಸ್ತಿ

ಬಿಟ್ಟುಕೊಟ್ಟಿಲ್ಲಾ ಆದ್ದರಿಂದ ಯಾವುದೇ ದಾಖಲೆ ಇಲ್ಲದೆ ಇರುವುದರಿಂದ ದಾಖಲೆ ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲಾ. ನನ್ನ ಸಹೋದರಿಯರಿಗೂ ಮತ್ತು ನಮಗೂ ಯಾವುದೇ ಹಕ್ಕು ಇಲ್ಲಾ ಅಂತಾ ಯಾವುದೇ ಸಹಿ ಪಡೆದಿಲ್ಲಾ ಎಂದರೆ ಸರಿಯಲ್ಲಾ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಆದೇಶಿ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.